ದಿನಾಂಕ: 13.07.2023

ಅಸಲು ದಾವೆ : 56/2017 ಪಿ.ಡಬ್ಲ್ಯೂ.2

**<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 2 ರಿಂದ 4 , 10 ಮತ್ತು 11 ಪ್ರತಿವಾದಿಗಳ ಪರ ವಕೀಲರಾದ ಶ್ರೀ ಬಿ.ಆರ್ ರವರಿಂದಃ</u>**

ನಾನು SSLC ವರೆಗೂ ಓದಿರುತ್ತೇನೆ. ವ್ಯವಸಾಯ ಮಾಡುತ್ತೇನೆ. 3 ನೇ ವಾದಿ ನನಗೆ ಅತ್ತೆ ಆಗಬೇಕು. ನಾನು ಊರಿನ ಯಜಮಾನ ಅಲ್ಲ. ನಮ್ಮ ಊರಿನಲ್ಲಿ ನನ್ನನ್ನು ಪಂಚಾಯಿತಿದಾರರಾಗಿ ಮಧ್ಯಸ್ಥಿಕೆ ಮಾಡಲು ಕರೆಯುತ್ತಾರಾ ಎಂದರೆ ಕರೆಯುವುದಿಲ್ಲ. ನಾನು ಯಾವುದೇ ಪಂಚಾಯಿತಿಗೆ ನ್ಯಾಯಾ ಮಾಡಲು ಹೋಗಿರುವುದಿಲ್ಲ. 3 ನೇ ವಾದಿ ತಂದೆ ಮನೆ ವಿಚಾರ ವೈಯಕ್ತಿಕವಾಗಿ ಗೊತ್ತಿರುವುದಿಲ್ಲ, ಅವರು ನನ್ನ ಬಳಿ ಹೇಳಿದ್ದು ಸ್ವಲ್ಪ ಗೊತ್ತಿರುತ್ತದೆ. ಅವರ ಮನೆ ಬಳಿ ಹೋಗಿದ್ದಾಗ 3 ನೇ ವಾದಿ ಅವರು ಮತ್ತು ಅವರ ಸಹೋದರಿಯರು ಭಾಗದ ಬಗ್ಗೆ ಪ್ರತಿವಾದಿಗಳ ಬಳಿ ಕೇಳಬೇಕು ಎಂದು ಹೇಳಿ ನನ್ನನ್ನು ಕೂಡ ಕರೆದುಕೊಂಡು ಹೋದರು. ಫೆಬ್ರವರಿ 2016 ರಲ್ಲಿ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ನಾನು ಮತ್ತು ಚೌಡಯ್ಯ ಬಳ್ಳೆಕೆರೆಗೆ ಹೋಗಿದ್ದು 1 ನೇ ಪ್ರತಿವಾದಿಯವರ ಮನೆಗೆ ಹೋಗಿರುತ್ತೇನೆ. ಊರಿನ ಮುಖಂಡರು 4-5 ಜನ ಸೇರಿದ್ದರು . ನಮ್ಮ ಊರಿನಿಂದ ನಾನು ಮತ್ತು ಮದ್ದೂರಲ್ಲಿ ವಾಸವಾಗಿರುವ ರಮೇಶ್ ಮತ್ತು 2 ನೇ ಪ್ರತಿವಾದಿ ಸೇರಿದ್ದರು. ಊರಿನ ಮುಖಂಡರು ಯಾರು ಎಂದು ತಿಳಿದುಕೊಂಡಿರುವುದಿಲ್ಲ. ಸಾಕ್ಷಿಯು ಸ್ವತಃ 4-5 ಮಾತುಗಳನ್ನು ಆಡಿ ವಾಪಾಸ್ಸು ಬಂದಿರುತ್ತೇವೆ ಎಂದು ನುಡಿಯುತ್ತಾರೆ. ಬೆಳಗ್ಗೆ 10.30 – 11.00 ಗಂಟೆಗೆ ಹೋಗಿರುತ್ತೇವೆ. ಚೌಡಯ್ಯ ಅವರ ಹೆಂಡತಿಯ ಪರವಾಗಿ ಮತ್ತು ವಾದಿಗಳ ಪರವಾಗಿ ಭಾಗವನ್ನು 1 ನೇ ಪ್ರತಿವಾದಿಗೆ ಕೇಳಿದ್ದರು . ಆಗ 1 ಮತ್ತು 2 ನೇ ಪ್ರತಿವಾದಿಗಳು ಭಾಗ ಕೊಡಲು ಆಗುವುದಿಲ್ಲ ಎಂದು ಹೇಳಿರುತ್ತಾರೆ. ಆ ಸಮಯದಲ್ಲಿ 1 ನೇ ಪ್ರತಿವಾದಿಯ ಸಹೋದರಿಯರು ಯಾರು ಹಾಜರಿರಲಿಲ್ಲ. ಅವರುಗಳ ಆಸ್ತಿಗಳು ಎಷ್ಟು ಇದ್ದವು ಎಂದು ನನಗೆ ನಿಖರವಾಗಿ ಗೊತ್ತಿರುವುದಿಲ್ಲ. ನಾನು ಹೇಳಿದ ಹಾಗೆ 1 ನೇ ಪ್ರತಿವಾದಿಯ ಮನೆ ಬಳಿ ಹೋಗಿರುವುದಿಲ್ಲ ಮತ್ತು ಯಾವುದೇ ಪಂಚಾಯಿತಿ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

45 ವರ್ಷದ ಹಿಂದೆ 1 ನೇ ಪ್ರತಿವಾದಿ ತಂದೆ ತಾಯಿ ಇದ್ದಾಗಲೇ ಭಾಗ ಆಗಿದ್ದು , ನಾನು ಹೇಳಿದ ಹಾಗೆ ವಾದಿಗಳಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿಯು ಹಿಂದೆ ಭಾಗ ಆಗಿದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**6 ರಿಂದ 9 ನೇ ಪ್ರತಿವಾದಿಗಳ ಪರ ವಕೀಲರು ಮೇಲೆ ಹೇಳಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲಾಗಿ ಪರಿಗಣಿಸಬೇಕೆಂದು ಹೇಳಿದ್ದು ಪರಿಗಣಿಸಲಾಗಿರುತ್ತದೆ.**

**ಮರು ವಿಚಾರಣೆ :** ಇರುವುದಿಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.